1546(2152) ಶ್ರೀ ಅಶೋಕ್. ಆರ್.(ಉತ್ತರ ಹಳ್ಳಿ) ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1. ಉತ್ತರಹಳ್ಳಿಯ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಬೊಮ್ಮನಹಳ್ಳಿ ನಗರಸಭೆಯಿಂದ ಎಷ್ಟು ಬಹುಮಹಡಿ ಕಟ್ಟಡಗಳಿಗೆ (ಅಪಾರ್ಟ್‌ಮೆಂಟ್) ಅನುಮತಿ ನೀಡಿದೆ (ವಿವರ ನೀಡುವುದು);

2. ಅದರಲ್ಲಿ ಎಷ್ಟು ಬಹುಮಹಡಿ ಕಟ್ಟಡಗಳು (ಅಪಾರ್ಟ್‌ಮೆಂಟ್) ನಕ್ಷೆ ಮಂಜೂರಾತಿಗೆ ವಿರುದ್ದವಾಗಿ ಕಟ್ಟಡಗಳನ್ನು ಕಟ್ಟಿವೆ (ವಿವರಗಳನ್ನು ನೀಡುವುದು) ;

3. ಈ ಬಗ್ಗೆ ತೆಗೆದುಕೊಂಡಿರುವ ಕಾನೂನು ಕ್ರಮವೇನು ?

ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ.ಸಚಿವರು.)

1. 209

2. 2003–04 ರಲ್ಲಿ 7 ಕಟ್ಟಡಗಳು
   2004–05 ರಲ್ಲಿ 13 ಕಟ್ಟಡಗಳು

3. ಈ ಬಗ್ಗೆ ಸಂಬಂಧಪಟ್ಟವರ ವಿರುದ್ಧ ಕ್ರಮ ಜರುಗಿಸಲಾಗುತ್ತಿದೆ.

1547(2153) ಶ್ರೀ ಅಶೋಕ್. ಆರ್. (ಉತ್ತರಹಳ್ಳಿ) ಮಾನ್ಯ ಪೌಡಾಡಳಿತ ಹಾಗೂ ಕೆ.ಯು.ಐ.ಡಿ.ಎಸ್.ಸಿ.ಸಚಿವರು)

1. ಉತ್ತರಹಳ್ಳಿ ಕ್ಷೇತ್ರದ ವ್ಯಾಪ್ತಿಗೆ ಬರತಕ್ಕಂತ ಬೊಮ್ಮನಹಳ್ಳಿ ನಗರಸಭೆಗೊಳಪಡುವ ಜೆ.ಪಿ.ನಗರ 7ನೇ ಫೇಸ್ 24ನೇ ಮೈನ್ ಮುಖ್ಯ ರಸ್ತೆಯಲ್ಲಿ ಕಟ್ಟಲಾಗಿರುವ ಮಹಾವೀರ, ಶ್ರೇಯಸ್, ರಾಜಲಕ್ಷ್ಮಿ ಮತ್ತು ಬಿಂದಿಯಾ ಅಪಾರ್ಟ್‌ಮೆಂಟ್‌ಗಳಿಗೆ ನಕ್ಷೆ ಯಾವಾಗ ಮಂಜೂರು ಮಾಡಲಾಗಿದೆ ;

2. ಈ ಅಪಾರ್ಟ್‌ಮೆಂಟ್‌ಗಳು ಕಾನೂನಿಗೆ ವಿರುದ್ದವಾಗಿ ಹಾಗೂ ನಕ್ಷೆಗೆ ವಿರುದ್ದವಾಗಿ ಕಟ್ಟಡವೆನ್ನು ಕಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

3. ಹಾಗಿದ್ದಲ್ಲಿ, ಮಂಜೂರಾದ ನಕ್ಷೆಗಳಲ್ಲಿ ಎಷ್ಟು ಶೇಕಡಾವಾರು ಬದಲಾಯಿಸಿ ಅಕ್ರಮವಾಗಿ ಕಟ್ಟಡಗಳು ನಿರ್ಮಾಣವಾಗಿವೆ ;

4. ಅಕ್ರಮವಾಗಿ ಕಟ್ಟಿರುವುದನ್ನು ತೆರವುಗೊಳಿಸಲು ಕೈಗೊಂಡ ಕಾನೂನು ಕ್ರಮವೇನು ?

ಶ್ರೀ ಎಸ್.ಆರ್.ಮೋರೆ (ಪೌಡಾಡಳಿತ ಹಾಗೂ ಕೆ.ಯು.ಐ.ಡಿ.ಎಸ್.ಸಿ.ಸಚಿವರು)

1. 1. ಮಹಾವೀರ ಅಪಾರ್ಟ್‌ಮೆಂಟ್ 2003–04 ರಲ್ಲಿ.
   2. ಶ್ರೇಯಸ್ ಅಪಾರ್ಟ್‌ಮೆಂಟ್ 2004–05 ರಲ್ಲಿ ನಕ್ಷೆ ಅನುಮೋದನೆ ನೀಡಲಾಗಿದೆ.
   3. ರಾಜಲಕ್ಷ್ಮಿ ಅಪಾರ್ಟ್‌ಮೆಂಟ್ ಮತ್ತು ಬಿಂದಿಯಾ ಅಪಾರ್ಟ್‌ಮೆಂಟ್‌ಗಳು ಬಿ.ಡಿ.ಎ.ಯಿಂದ ನಕ್ಷೆ ಮಂಜೂರಾತಿ ಪಡೆದಿರುತ್ತವೆ.
2. ಹೌದು.
3. ಸುಮಾರು ಶೇಕಡ 15 ರಿಂದ 20.
4. ಸಂಬಂಧಪಟ್ಟವರಿಗೆ ನೋಟೀಸನ್ನು ಜಾರಿ ಮಾಡಿದೆ.

1548(2154) ಶ್ರೀ ಆರ್.ಅಶೋಕ್.ಎಂಎಲ್‌ಎ (ಉತ್ತರಹಳ್ಳಿ) ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ರಿಂಗ್ ರಸ್ತೆ ಮತ್ತು ನ್ಯಾಷನಲ್